
‘ಹಾರಿಬಿಡಲೇ…’ ಎನಿಸಿತು. ಮರುಕ್ಷಣ ‘ತವರಿಗೆ ಅಪವಾದ ಬೇಡ’ ಎಂದುಕೊಳ್ಳುತ್ತ ಸೊಂಟದ ಮೇಲೆ ಕೊಡವನ್ನಿಟ್ಟುಕೊಂಡು ಹೊರಟೆ. ಅಂತರಾತ್ಮ ಕಿಸಕ್ಕನೆ ನಕ್ಕಿತು. ತವರಿನ ಮರ್ಯಾದೆಯ ಬಗ್ಗೆ ಯೋಚಿಸುತ್ತ ಇಡೀ ಜೀವನವನ್ನೇ ತಪಸ್ವಿನಿಯಂತೆ ಕಳೆಯುತ್ತಿದ್ದರೆ ಅವರೇ ನನ್ನನ್ನು ಕಡಿದು ಬುಟ್ಟಿಗೆ ತುಂಬಲು ಸಿದ್ಧರಾಗಿದ್ದರು. ಹೆಜ್ಜೆ ಹಾಕುತ್ತಿದ್ದಂತೆ ದಾರಿಯಲ್ಲಿ ಶಂಕರನ ಮನೆಯ ಮುಂದೆ ಕಾರು ನಿಂತಿದ್ದನ್ನು ಕಂಡೆ. ಅಜ್ಜಿಯನ್ನು ಕಾರಿನಲ್ಲಿ ಕೂರಿಸಲು ಹೆಣಗಾಡುತ್ತಿದ್ದ ಶಂಕರ. ತಕ್ಷಣ ಕೊಡವನ್ನು ಕೆಳಗಿಟ್ಟು ಅವರನ್ನು ಹಿಡಿದುಕೊಂಡೆ. ಇಬ್ಬರೂ ಸೇರಿಯೇ ಅವರನ್ನು ಒಳಗೆ ಕೂರಿಸಿದೆವು. ಶಂಕರನ ಸ್ಪರ್ಶ, ಬಿಸಿಯುಸಿರು ತಾಗುತ್ತಿದ್ದಂತೆ ಮರಗಟ್ಟಿದ್ದ ಚೈತನ್ಯ ಪುಟಿದೆದ್ದಿತ್ತು. ಮನಸ್ಸು ಇನ್ನೂ ಅವನನ್ನು ಪ್ರೀತಿಸುತ್ತಿದ್ದ ಬಗ್ಗೆ ಸಾಕ್ಷಿ ಹೇಳಿತು. ಅಲ್ಲೂ ಅದೇ ಛಾಯೆ. ಅವನ ರೋಮಗಳೂ ನಿಮಿರಿ ನಿಂತು ಮುಖವೆಲ್ಲ ಕೆಂಪಾಗಿತ್ತು. ಯಾವುದೂ ಅರಿವಿಲ್ಲದೇ ಬಾಯಲ್ಲಿ, “ಶಿವ…ಶಿವ…” ಎನ್ನುತ್ತಿದ್ದ ಅಜ್ಜಿಯನ್ನು ಹಿಂದಿನ ಸೀಟಿನಲ್ಲಿ ಮಲಗಿಸಿದೆವು.

“ನೀ ಬಂದಿ, ಛೊಲೊ ಆತು ರುಕ್ಕು. ಇಲ್ಲಾಂದ್ರ ಅಜ್ಜಿನ್ನ ಕಾರು ಹತ್ತಸೋದು ಭಾಳ ತ್ರಾಸಾಗ್ತಿತ್ತು. ಎಂಬತ್ತೈದು ವರ್ಷ. ಕಿವಿ ಕೇಳಸೂದುಲ್ಲಾ. ಕಣ್ಣು ಮಂದ ಆಗ್ಯಾವ. ನನ್ನ ಜೋಡಿ ನಡೀ ಅಂದ್ರ ಇಲ್ಲೇ ನನ್ನ ಮನ್ಯಾಗ ಇರ್ತೇನಂತ ಹಟಾ ಮಾಡ್ತಾಳ. ಇವತ್ತ ಜೋರಲೇನ ಕರಕೊಂಡು ಹೊಂಟೇನಿ. ಅಲ್ಲೇ ಬೆಳಗಾವ್ಯಾಗ ಡಾಕ್ಟರಿಗೆ ತೋರಸಿದ್ರಾತು… ಅಂತ. ಮಂಚಿಗೆ ಬರಲಿಕ್ಕೆ ಹೇಳಿದ್ದೆ. ಯಾಕೋ ತಡಾ ಮಾಡಿದ್ಲು” ಎನ್ನುತ್ತ ಶಂಕರ ಡ್ರೈವರ್ ಸೀಟಿನಲ್ಲಿ ಕುಳಿತ. “ಮತ್ತ… ನೀ ಹೆಂಗಿದ್ದೀ?” ಎಂದು ಕೇಳಿದ. ಅಲ್ಲಿಯವರೆಗೆ ಸುಮ್ಮನಿದ್ದವಳು ಬಾಯಿ ಬಿಟ್ಟೆ. “ಇದ್ದೇನಿ… ಹಿಂಗ, ದಡಾ ಕಾಣದ ನಟ್ಟನಡುವ ನೀರಾಗ ನಿಂತ ದೋಣಿ ಹಾಂಗ” ಎಂದೆ. “ದಡಾ ಕರದಾಗ ನೀ ಬರಲಿಲ್ಲಾ” ಎನ್ನುತ್ತ ಆಕ್ಷೇಪಾರ್ಹ ನೋಟ ಬೀರಿದ. “ಆವಾಗ ಮುಹೂರ್ತ ಇರಲಿಲ್ಲ. ಈಗ ಬಂದದ” ಎಂದೆ. ದೀರ್ಘವಾಗಿ ನನ್ನತ್ತ ನೋಡಿದವ, “ಈಗ ಆ ವೇಳ್ಯಾ ಹೋತು… ಪಾಸಂಗ ಮೀರಿತು” ಎಂದ. “ಕೆಲವೊಮ್ಮೆ ಮುಹೂರ್ತ ತಡಾ ಆಗಿ ಬರ್ತಾವ. ಆದರ ಮುಂದ ಬದುಕಿರ್ತದ” ಎಂದೆ. ನಾನು ಮಾತನಾಡುತ್ತಿರುವ ಬಗ್ಗೆ ನನಗೇ ಆಶ್ಚರ್ಯ. ಎಂದೂ ಹೀಗೆ ಮಾತನಾಡಿದವಳಲ್ಲ. ಇದು ನಾನೇನಾ ಅಥವಾ ಯಾರಾದರೂ ನನ್ನ ಬಾಯಿಂದ ನುಡಿಸುತ್ತಿದ್ದಾರಾ? ಗೊತ್ತಿಲ್ಲ. “ಅಂದ್ರ… ಅಂದ್ರ ಈಗ ಹ್ಞೂಂ… ಅಂತೀಯೇನು?” ಎಂದು ಅಚ್ಚರಿಯಿಂದ ಕೇಳಿದ. ಒಂದು ಕ್ಷಣ ಅಲ್ಲಿ ಮೌನ ರಾಜ್ಯವಾಳಿತು. ಮರುಕ್ಷಣ ನಿರೀಕ್ಷೆ ತುಂಬಿದ ನೋಟದಿಂದ ತನ್ನ ಕೈ ಮುಂದೆ ಚಾಚಿದ. ನಾನು ಅದರಲ್ಲಿ ರಾಯರನ್ನೇ ನೆನೆಸುತ್ತಾ ಬಲಹಸ್ತವನ್ನಿಟ್ಟೆ. ಕಾರೇರಿ ಕುಳಿತೆ. ಆನಂದದಿಂದ ಅವನು ಬಾಗಿಲು ಹಾಕಿದ. ಆ ರಭಸಕ್ಕೆ ತುಂಬಿಟ್ಟಿದ್ದ ಕೊಡದ ನೀರು ಉರುಳಿ ಹರಿದು ಥಳಿ ಹಾಕಿತು. ಒಂದು ಕ್ಷಣ ಮನ ನಿಶ್ಚಿಂತೆಯ ಭಾವದಲ್ಲಿ ಅರಳಿತು. ಅವ್ವನ ನೆನಪಾಯಿತು. ಕಾರು ಭರ್ರನೆ ಸಾಗುತ್ತಿದ್ದಂತೆ ದೂರದಲ್ಲಿ ಸಂತಸದಿಂದ ಕಣ್ಣೊರೆಸಿಕೊಳ್ಳುತ್ತಿದ್ದ ಮಂಚಿ ಕಾಣಿಸಿದಳು. ಆನಂದದಿಂದ ಕೈ ಬೀಸಿದೆ. ದೋಣಿ ಭರವಸೆಯ ದಡ ಸೇರಿತ್ತು.




**ಮಧುರಾ ಕರ್ಣಮ್**

ಲೇಖಕಿ ಮಧುರಾ ಬೆಳಗಾವಿಯವರು. ವಿದ್ಯಾಭ್ಯಾಸ – ಬಿ.ಎಸ್ಸಿ., ಎಲ್‌ಎಲ್‌ಬಿ. ಕತೆ, ಹಾಸ್ಯಬರಹಗಳನ್ನು ಬರೆದಿದ್ದಾರೆ. ‘ಮರಳಿ ಬಂದನಾ ವಸಂತ’, ‘ಋಣ’, ‘ಅವಳ ಭಾವಗಳ ಸುತ್ತ’, ‘ಗುಂಡಪುರಾಣ’, ‘ಜೀವಧಾರಾ… ನಿರಂತರಾ…’, ‘ಆಕ್ರಮಣ’ ಅವರ ಪ್ರಕಟಿತ ಕೃತಿಗಳು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.